**ಸಾಕ್ಷಿಯನ್ನು ದಿಃ 06.04.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಸಿ.ಎಂ. ವಕೀಲರಿಂದಃ**

ನಾನು ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯ ಹೇಳಲು ಬಂದಿರುತ್ತೇನೆ. ವಾದಿ ನನ್ನ ಮೈದುನ ಅಂದರೆ ನನ್ನ ಯಜಮಾನರ ತಮ್ಮ. ನಮ್ಮ ಕುಟುಂಬದಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ವಿಭಾಗ ಪತ್ರದ ಮೂಲಕ ವಿಭಾಗ ಆಗಿಲ್ಲ. ಎಸ್.ಎನ್. ಮುನಿಶಾಮಿ ನಮ್ಮ ಮಾವ. ನನ್ನ ಅತ್ತೆಯ ಹೆಸರು ಮುನಿಲಕ್ಷ್ಮಿ. ಮುನಿಶಾಮಿ ಮತ್ತು ಮುನಿಲಕ್ಷ್ಮಿರವರಿಗೆ 10 ಜನ ಮಕ್ಕಳು. ಅವರಲ್ಲಿ 6 ಜನ ಗಂಡು ಮಕ್ಕಳು,4 ಜನ ಹೆಣ್ಣು ಮಕ್ಕಳು. ಮೊದಲನೆಯ ಮಗ ವೆಂಕಟೇಶ್, ಅವರು ಮರಣ ಹೊಂದಿರುತ್ತಾರೆ, 2 ನೇ ಮಗ ಮುನೀಂದ್ರಪ್ಪ (1 ನೇ ಪ್ರತಿವಾದಿ), 3 ನೇ ಮಗ ಶ್ರೀರಾಮಚಂದ್ರ (2 ನೇ ಪ್ರತಿವಾದಿ), 4 ನೇ ಮಗ ವೆಂಕಟಸ್ವಾಮಿ (3 ನೇ ಪ್ರತಿವಾದಿ), 5 ನೇ ಮಗ ಗೋಪಾಲ (4 ನೇ ಪ್ರತಿವಾದಿ) ಮತ್ತು 6 ನೇ ಮಗ ಬಾಬು (ವಾದಿ).

ನಮ್ಮ ಮಾವ ಎಸ್.ಎನ್. ಮುನಿಶಾಮಿ ರವರು ಶಿಕ್ಷಣ ಇಲಾಖೆಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದನು. ಎಸ್.ಎನ್. ಮುನಿಶಾಮಿರವರ ಎಲ್ಲಾ ಕುಟುಂಬ ಸೂಲಿಕುಂಟೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಬೇರೆ ಬೇರೆಯಾಗಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನಾನು ಮದುವೆಯಾಗುವುದಕ್ಕಿಂತ ಮುಂಚೆ ನನ್ನ ಗಂಡ ಸೂಲಿಕುಂಟೆ ಗ್ರಾಮದಲ್ಲಿ ವಾಸವಾಗಿದ್ದರು. ನನ್ನ ಗಂಡ ರಾಮಚಂದ್ರ (2 ನೇ ಪ್ರತಿವಾದಿ) ಶಿಕ್ಷಕರಾಗಿ 1981 ರಲ್ಲಿ ನೇಮಕಗೊಂಡಿದ್ದರು. ನಾನು ಅದೇ ವರ್ಷ ಶಿಕ್ಷಕಿಯಾಗಿ ನೇಮಕಗೊಂಡಿದ್ದೆನು.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಅದರಂತೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.